# ಆಡೋಣ ಬಾ, ಪ್ಲೀಸ್!

ಠೂ ಬಿಡ್ತೀವಿ ನೋಡು
ನೀ ಆಟಕ್ ಬರದಿದ್ರೆ
ಏತಾ–ಪೇತಾ ಕಳೆಗಟ್ಟತ್ತೆ
ನೀ ನಮ್ ಜೊತೆಗಿದ್ರೆ.

ಕಂಪ್ಯೂಟರ್ ಗೇಮ್ ಬೇಡ
ಎತ್ತಿಟ್‌ಬಿಡು ಸಾಕು
ಕಣ್ಣಾಮುಚ್ಚೆ ಕಾಡೇಗೂಡೆ
ಆಡೋಕ್ ನೀನ್ ಬೇಕು.

ಬೌಲಿಂಗ್ ಮಾಡು ನೀನು
ಬ್ಯಾಟಿಂಗ್ ಮಾಡ್ತೀನ್ ನಾನು
ಫೀಲ್ಡಿಂಗ್, ಕೀಪಿಂಗ್, ಕ್ಯಾಚಿಂಗ್
ಎಲ್ಲಾ ಮಾಡ್ತಾನ್ ಅವನು.

ಗೋಲಿ ಬಚ್ಚಿಟ್ಟಿದ್ದಾಳೆ ಅಮ್ಮ
ಬಂದು ಡಬ್ಬಿ ತಕ್ಕೊಡು
ಚಿನ್ನಿ–ದಾಂಡು ಎಲ್ಲೋ ಇದೆ
ಹುಡ್ಕೋದಕ್ ಹೆಲ್ಪ್ ಮಾಡು.

ಸೈಕಲ್ ಬ್ಯಾಲೆನ್ಸ್ ಮಾಡೋದನ್ನ
ಕಲಿಸಿಕೊಡಲೇ ಬೇಕು
ಗಿಟಾರ್, ಕೀ–ಬೋರ್ಡ್ ನುಡಿಸೋದನ್ನ
ಹೇಳಿಕೊಟ್ಟರೂ ಸಾಕು.

ಪ್ಲೀಸ್, ಪ್ಲೀಸ್ ಬಾರಪ್ಪ
ಆನೆ ಸವಾರಿ ಮಾಡ್ಸಪ್ಪ
ಲ್ಯಾಪ್‌ಟಾಪ್ ತಂಟೆ ಬೇಡಪ್ಪ
ನಮ್ ಜೊತೆ ನೀ ಆಡಪ್ಪ!

● ಬೇದ್ರೆ ಮಂಜುನಾಥ



# ಆನ್‌ಲೈನ್

ಮುದ್ದು ಮಗಳಿಗೆ ತೋರಿಸುವುದೆಲ್ಲ
ಆಯಿತಲ್ಲ
ಈಗ ನನ್ನ ಆನ್‌ಲೈನ್ ಸಮಯ
ಇನ್ನೊಂದು ಗಂಟೆಯವರೆಗೆ
ಮನೆಯ ಒಳಗೇ ಇರಬೇಕಂತೆ
ನನಗೆ ಡಿಸ್ಟರ್ಬ್ ಮಾಡದಿರಿ ಅಪ್ಪ
ಅನಂತರ ನಿಮ್ಮ ಲ್ಯಾಪ್‌ಟಾಪ್
ನಿಮಗೇ... ಮನೆಯಿಂದ ಕೆಲಸ
ಮಾಡಿಕೊಳ್ಳುವಿರಂತೆ
ಬಿಡಿ ನನಗೆ ಪುಟ್ಟ ತಂಗಿಯ ಚಿಂತೆ
ನನ್ನ ನೃತ್ಯ ತರಬೇತಿಯ
ಸಮಯಕ್ಕೆ ಮತ್ತೆ ಕೊಡುವಿರಂತೆ
ನೀವು ಅಮ್ಮ ಕುಳಿತು ಕಾಫಿ
ಕುಡಿಯುವಿರಂತೆ
ಇನ್ನಾದರೂ ನಂಬಿಕೆ ಬಂತೇ?
ಅಭ್ಯಾಸವಾಗಿದೆ ಈ ಹೊಸ ಸಂತೆ
ಬಹಳ ಗೆಳತಿಯರು ಈಗ ನನ್ನಂತೆ!

● ತಲಕಾಡು ಶ್ರೀನಿಧಿ